ಭಾಷೆಗಳನ್ನು ಕುರಿತ ಅಜ್ಞಾನ, ಅವರು ಭಾರತೀಯತೆಯನ್ನು ಹಿಂದೀ ತಿಳಿದಿರುವುದರೊಡನೆ ಸಮೀಕರಿಸುವುದು– ಇಂತಹ ಆಕ್ರಮಣಶೀಲ ಪ್ರವೃತ್ತಿಗಳನ್ನು ವಿರೋಧಿಸುತ್ತೇನೆ.

ಭಾಷೆಯ ಅಸಹನೆ ಸಲ್ಲದು. ಮಾತೃಭಾಷೆಯು ಅಂತರಂಗದಲ್ಲಿ ನೆಲೆಗೊಂಡ ಮೇಲೆ ಎಷ್ಟು ಭಾಷೆ ಕಲಿತರೂ ಆತ ಶ್ರೀಮಂತನೇ. ಹಿಂದಿಯಿಂದ ಕನ್ನಡಿಗರಿಗೆ ಆಗಬಹುದಾದ ಲಾಭಗಳು ಅನೇಕವಿವೆ. ಆದರೆ ಭಾಷಾ ಹೇರಿಕೆ ನನಗೂ ಇಷ್ಟವಿಲ್ಲ.

◆ **ನೀವು ಅಮೆರಿಕಕ್ಕೆ ಹೋಗಿ ನಲವತ್ತಾರು ವರ್ಷವಾಯಿತು. ಅಲ್ಲಿಗೆ ಹೊರಟಿದ್ದರ ಆತಂಕ, ನೆನಪು...**

ಆದಾಗ ನಾನು ಎಂ.ಎ. ನಂತರ ಬೆಂಗಳೂರಲ್ಲೇ ಅಧ್ಯಾಪಕ ಹುದ್ದೆಗೆ ಪ್ರಯತ್ನ ಮಾಡುತ್ತಿದ್ದೆ. ಆದರೆ ಸೆಂಟ್ರಲ್ ಕಾಲೇಜಿನಲ್ಲಿದ್ದ ನನ್ನ ಮೇಷ್ಟ್ರು ಡಬ್ಲ್ಯು.ಡಬ್ಲ್ಯು.ಎಸ್. ಭಾಸ್ಕರ್ ಅವರು ಸದ್ಯಕ್ಕೆ ಕೆಲಸ ಬೇಡ, ತಾಳು ಎಂದರು. ಅವರು **Teaching English as Second Language** ಕಲಿಸಿದ್ದರು. ಕಾಯಕದ ಬಗ್ಗೆ ಅವರಿಗೆ ತುಂಬಾ ಗೌರವ, ಶ್ರದ್ಧೆ ಇತ್ತು. ಉದಾರ ಸ್ವಭಾವ, ಹೆಚ್ಚು ಮಾತಾಡುತ್ತಿರಲಿಲ್ಲ. ನನಗೆ ಸದ್ಯಕ್ಕೆ ತಾಳು ಎಂದರಲ್ಲ, ಅವರ ಮಾತನ್ನು ನಂಬಿದೆ. ಅಷ್ಟು ಹೊತ್ತಿಗೆ ಹೈದರಾಬಾದಿನಿಂದ ಪ್ರೊ. ಎಂ.ಎಲ್. ತಿಕ್ಕು ಬಂದಿದ್ದರು. ಭಾಸ್ಕರ್ ಅವರಿಂದ ಅವರ ಪರಿಚಯವಾಗಿ ನಾನು ಹೈದರಾಬಾದಿನ ಇ.ಎಫ್.ಎಲ್.ಯುನಲ್ಲಿ ಸಂಶೋಧಕನಾದೆ. ಒಂದು ವರ್ಷ ಆ ಕೆಲಸದಲ್ಲಿದ್ದೆ. ಅಲ್ಲಿ ನನಗೆ ಭಾರತೀಯ ಇಂಗ್ಲಿಷ್ ಸಂಪರ್ಕ ಆಯಿತು. ಅಲ್ಲಿಗೆ ದೇಶೀಯ, ವಿದೇಶೀಯ ವಿದ್ವಾಂಸರು ಬರುತ್ತಿದ್ದರು. ನನ್ನ ತಿಳಿವಳಿಕೆಯ ಪರಿಧಿ ವಿಸ್ತಾರವಾಯಿತು. ಒಮ್ಮೆ ಅಮೆರಿಕದ ಇಲಿನಾಯ್‌ನಿಂದ ಭಾಷಾಶಾಸ್ತ್ರಜ್ಞ ಬ್ರಜ್ ಕಾಚ್ರು ಬಂದಿದ್ದರು. ಅವರು **World Englishes** ವಿಷಯ ಕುರಿತ ಪ್ರಸಿದ್ಧ ವಿದ್ವಾಂಸರು. ಅಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ನಾನೂ ಒಂದು ಪತ್ರಿಕೆ ಮಂಡಿಸಿದೆ. ಅವರು ನನ್ನನ್ನು ಮಾತನಾಡಿಸಿ ಮುಂದೆ ನಿನ್ನ ಉದ್ದೇಶವೇನು ಅಂದರು. ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಪಿಎಚ್.ಡಿ. ಮಾಡಬೇಕು ಅಂತಿದ್ದೇನೆಂದೆ. ಅಷ್ಟರಲ್ಲಿ ಭಾಷಾವಿಜ್ಞಾನಿ ನೋಮ್ ಚಾಮ್‌ಸ್ಕಿಯನ್ನು ಓದಿ ಮೆಚ್ಚಿಕೊಂಡಿದ್ದೆ. ಎಸ್ತರ್ ನಲ್ಲಮುತ್ತು ಎಂಬ ಸ್ನೇಹಿತೆ ನನಗೆ ಆ ಸಂಸ್ಥೆಗೆ ಸೇರಲು ಹೇಳಿದ್ದಳು. ಆದರೆ ಬ್ರಜ್ ಕಾಚ್ರು ಅಮೆರಿಕದ ಇಲಿನಾಯ್ ವಿ.ವಿ.ಯಲ್ಲಿ ಸಂಶೋಧನ ಸಹಾಯಕನಾಗಿ ಬಾ, ಅಲ್ಲಿ ಪಿಎಚ್.ಡಿ ಮಾಡು ಅಂದರು. ನನ್ನ ತಂದೆ ಆಗ ಕೆಲಸದಿಂದ ನಿವೃತ್ತರಾಗಿದ್ದರು. ನನಗೆ ಕೆಲಸಕ್ಕೆ ಸೇರಲೇಬೇಕಾದ ಅನಿವಾರ್ಯ, ವ್ಯರ್ಥ ಸಾಹಸ ಯಾಕೆ? ಈ ಆತಂಕವೆಲ್ಲ ಬೇಡ ಅನ್ನಿಸಿತು. ಇಷ್ಟರ ಮೇಲೂ ಅಲ್ಲಿಗೆ ಅರ್ಜಿ ಹಾಕಿದ ಮೊದಲ ಬಾರಿಗೆ ಸಿಗಲಿಲ್ಲ. ಎರಡನೆಯ ಪ್ರಯತ್ನದಲ್ಲಿ ಅಲ್ಲಿ ಸಂಶೋಧನ ಸಹಾಯಕನಾಗಿ ಅವಕಾಶ ಸಿಕ್ಕಿತು...

◆ **ಅಮೆರಿಕದ ವಿಶ್ವವಿದ್ಯಾಲಯಗಳ ಪಠ್ಯಕ್ರಮ, ಬೋಧನಾ ಮಾದರಿ ಮತ್ತು ವಿದ್ಯಾರ್ಥಿಗಳ ಆಸಕ್ತಿ ಹೇಗೆ...**

ಒಂದೇ ಮಾದರಿ ಪಠ್ಯ ಇರದ ವಿಕೇಂದ್ರಿತ ಬೋಧನಾ ಕ್ರಮ ಅಮೆರಿಕದ ವಿವಿಗಳಲ್ಲಿ ಇದೆ. ಒಂದೇ ವಿಭಾಗದಲ್ಲಿ ಕೂಡ ಹಲವು ಬಗೆಯ ಪಠ್ಯ ಇಟ್ಟುಕೊಂಡು ತರಗತಿಯಲ್ಲಿ ಚರ್ಚಿಸುತ್ತಾರೆ. ಅಧ್ಯಾಪಕರು ತುಂಬ ಸ್ವತಂತ್ರರು. ಎಲ್ಲರಿಗೂ ಒಂದು ಸಾಮಾನ್ಯ ನಿಯಮಾವಳಿ ಇರುತ್ತದೆ, ಅಷ್ಟೆ. ಪರಸ್ಪರ ಸ್ಪರ್ಧೆ ಇರುತ್ತದೆ. ವಿಶ್ವವಿದ್ಯಾಲಯದ ಮೇಲಿನವರಿಗೆ ನಮ್ಮ ಮೇಲೆ ನಂಬಿಕೆ ಇರುತ್ತದೆ. ಆ ನಂಬಿಕೆಯನ್ನು ನಾವು ಉಳಿಸಿಕೊಳ್ಳುವುದು ಇದೆಯಲ್ಲ ಅದು ಮುಖ್ಯ. ನಮ್ಮ ಸಂಶೋಧನಾ ಸಾಮರ್ಥ್ಯವನ್ನು ತೋರಿಸಲೇಬೇಕು. ನಮ್ಮಲ್ಲಿ ಸ್ವಾತಂತ್ರ್ಯ, ನಂಬಿಕೆ, ಸ್ಪರ್ಧೆ ಇವು ಮೂರೂ ಬಹುಮುಖ್ಯ. ಈ